

بسم اللهِ الرّحمٰنِ الرّحيم

# ಗುಜ್ರಾನ್‌ವಾಲದಲ್ಲಿ ಅಹ್ಮದಿಯರ ವಿರುದ್ಧ ಮಾಡಲಾದ ದೌರ್ಜನ್ಯಕರ ದಾಳಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **01-08-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ತಿಲಾವತ್ ಮಾಡಿದರು:

وَالسَّمَآءِ ذَاتِ الْبُرُوْجِ ۙ﴿۲﴾ وَالْيَوْمِ الْمَوْعُوْدِ ۙ﴿۳﴾ وَشَاهِدٍ وَّمَشْهُوْدٍ ؕ﴿۴﴾ قُتِلَ اَصْحٰبُ الْاُخْدُوْدِ ۙ﴿۵﴾ النَّارِ ذَاتِ الْوَقُوْدِ ۙ﴿۶﴾ اِذْ هُمْ عَلَيْهَا قُعُوْدٌ ۙ﴿۷﴾ وَّهُمْ
عَلٰى مَا يَفْعَلُوْنَ بِالْمُؤْمِنِيْنَ شُهُوْدٌ ؕ﴿۸﴾ [۸۵:۲-۸] وَمَا نَقَمُوْا مِنْهُمْ اِلَّاۤ اَنْ يُّؤْمِنُوْا بِاللّٰهِ الْعَزِيْزِ الْحَمِيْدِ ۙ﴿۹﴾ [۸۵:۹]
الَّذِيْ لَهٗ مُلْكُ السَّمٰوٰتِ وَالْاَرْضِ ؕ وَاللّٰهُ عَلٰى كُلِّ شَيْءٍ شَهِيْدٌ ؕ﴿۱۰﴾ اِنَّ الَّذِيْنَ فَتَنُوا الْمُؤْمِنِيْنَ وَالْمُؤْمِنٰتِ ثُمَّ لَمْ يَتُوْبُوْا فَلَهُمْ عَذَابُ
جَهَنَّمَ وَلَهُمْ عَذَابُ الْحَرِيْقِ ؕ﴿۱۱﴾ اِنَّ الَّذِيْنَ اٰمَنُوْا وَعَمِلُوا الصّٰلِحٰتِ لَهُمْ جَنّٰتٌ تَجْرِيْ مِنْ تَحْتِهَا الْاَنْهٰرُ ؕ ذٰلِكَ الْفَوْزُ الْكَبِيْرُ ؕ﴿۱۲﴾

*ವಸ್ಸಮಾಇ ಝಾತಿಲ್ ಬುರೂಜ್. ವಲ್ ಯೌಮಿಲ್‌ಮೌಊದ್. ವ ಶಾಹಿದಿನ್ ವ ಮಶ್‌ಹೂದ್. ಖುತಿಲ ಅಸ್‌ಹಾಬುಲ್ ಉಖ್‌ದೂದಿನ್ನಾರಿ ಝಾತಿಲ್ ವಖೂದ್. ಇಝ್‌ಹುಮ್ ಅಲೈಹಾ ಖುಊದುನ್ ವ ಹುಮ್ ಅಲಾ ಮಾ ಯಫ್‌ಅಲೂನ ಬಿಲ್ ಮೂಮಿನೀನ ಶುಹೂದ್. ವಮಾ ನಖಮೂ ಮಿನ್‌ಹುಮ್ ಇಲ್ಲಾ ಅನ್‌ಯೂಮಿನೂ ಬಿಲ್ಲಾಹಿಲ್ ಅಝೀಝಿಲ್ ಹಮೀದಿಲ್ಲಝೀ ಲಹೂ ಮುಲ್‌ಕುಸ್ಸಮಾವಾತಿ ವಲ್ ಅರ್‌ಝೀ ವಲ್ಲಾಹು ಅಲಾ ಕುಲ್ಲಿ ಶೈಯಿನ್ ಶಹೀದ್. ಇನ್ನಲ್ಲಝೀನ ಫತನುಲ್ ಮೂಮಿನೀನ ವಲ್ ಮೂಮಿನಾತಿ ಸುಮ್ಮ ಲಮ್ ಯತೂಬೂ ಫಲಹುಮ್ ಅಝಾಬು ಜಹನ್ನಮ ವಲಹುಮ್ ಅಝಾಬುಲ್ ಹರೀಖ್. ಇನ್ನಲ್ಲಝೀನ ಆಮನೂ ವ ಅಮಿಲುಸ್ವಾಲಿಹಾತಿ ಲಹುಮ್ ಜನ್ನಾತುನ್ ತಜ್‌ರೀ ಮಿನ್ ತಹ್‌ತಿಹಲ್ ಅನ್‌ಹಾರ್; ಝಾಲಿಕಲ್ ಫೌಝುಲ್ ಕಬೀರ್.*

ಅರ್ಥ: **ನಕ್ಷತ್ರ ರಾಶಿಗಳಿಂದ ಕೂಡಿದ ಆಕಾಶದಾಣೆ. ವಾಗ್ದಾನ ನೀಡಲ್ಪಟ್ಟ ದಿನದಾಣೆ; ಸಾಕ್ಷಿಯಾಣೆ ಮತ್ತು ಸಾಕ್ಷಿ ಹೇಳಲ್ಪಡುವವನಾಣೆ. ಕಂದಕದ ಜನರು ನಾಶಹೊಂದಲಿ– ಇಂಧನದಿಂದ ಬೆಂಕಿಯನ್ನು ಪ್ರಜ್ವಲಗೊಳಿಸುವವರು. ಅವರು ಅದರ ಸಮೀಪ ಕುಳಿತು ಕೊಂಡಿರುವಾಗ, ಸತ್ಯ ವಿಶ್ವಾಸಿಗಳಿಗೆ ಅವರು ಏನು ಮಾಡಿದ್ದಾರೆಂಬುದಕ್ಕೆ ಅವರೇ ಸಾಕ್ಷಿಗಳಾಗಿದ್ದಾರೆ. ಪ್ರತಾಪಶಾಲಿಯೂ ಸ್ತುತ್ಯರ್ಹನೂ ಆದ ಅಲ್ಲಾಹನನ್ನು ಅವರು ನಂಬುತ್ತಾರೆ ಎಂಬುದಕ್ಕೆ ಹೊರತು (ಬೇರಾವುದಕ್ಕೂ) ಅವರು ಅವರನ್ನು ದ್ವೇಷಿಸಿರಲಿಲ್ಲ. ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ಅವನಿಗಿದೆ. ಅಲ್ಲಾಹನು ಸರ್ವ ಸಂಗತಿಗಳಿಗೂ ಸಾಕ್ಷಿಯಾಗಿದ್ದಾನೆ. ಯಾರು ಸತ್ಯ ವಿಶ್ವಾಸಿಗಳನ್ನೂ ಸತ್ಯ ವಿಶ್ವಾಸಿನಿಯರನ್ನೂ ಪೀಡಿಸುತ್ತಾರೋ ಹಾಗೂ ಆ ಬಗ್ಗೆ ಪಶ್ಚಾತ್ತಾಪ ಪಡುವುದಿಲ್ಲವೋ ಅವರಿಗೆ ಖಂಡಿತವಾಗಿಯೂ ನರಕಶಿಕ್ಷೆ ಇದೆ. ಅವರಿಗೆ ಉರಿಯುವ ಶಿಕ್ಷೆಯೂ ಇದೆ. ಆದರೆ ಯಾರು ಸತ್ಯ ವಿಶ್ವಾಸಹೊಂದಿ ಸತ್ಕರ್ಮ ನಿರತರಾಗಿರುವರೋ, ಅವರಿಗೆ ಕೆಳಬದಿಯಲ್ಲಿ ನದಿಗಳು ಹರಿಯುವ ಸ್ವರ್ಗೀಯ ತೋಟಗಳಿವೆ. ಅದು ಮಹಾ ವಿಜಯವಾಗಿದೆ.** (ಸೂರ ಅಲ್‌ಬುರೂಜ್: 2–12)

ಮೇಲೆ ಉಲ್ಲೇಖಿಸಲಾದ ಪವಿತ್ರ ಖುರ್‌ಆನಿನ ವಚನಗಳು ಗುಜ್ರಾನ್‌ವಾಲದಲ್ಲಿ ಅಹ್ಮದಿಯರ ವಿರುದ್ಧ ಮಾಡಲಾದ ದೌರ್ಜನ್ಯವನ್ನು ಸ್ಪಷ್ಟವಾಗಿ ಚಿತ್ರೀಕರಿಸುತ್ತದೆ. ಅಹ್ಮದಿಯ್ಯತ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆ ಬಗ್ಗೆ ಈ ವಚನಗಳು ಎಂತಹ ಸಾಕ್ಷ್ಯ ನೀಡುತ್ತವೆ ಎಂದರೆ ನಿರ್ಮಲ ಹೃದಯರಾಗಿ ಮುಸ್ಲಿಮರು ಈ ವಚನಗಳಲ್ಲಿ ಚಿಂತಿಸುವುದಾದರೆ ಅಹ್ಮದಿಯರು ಅನುಭವಿಸುತ್ತಿರುವ ದೌರ್ಜನ್ಯಗಳ ವಾಸ್ತವಿಕತೆ ಅವರಿಗೆ ಮನವರಿಕೆ ಆಗುವುದು. ಅವರು ತಮ್ಮ ಮುಖಂಡರುಗಳಾದ ರಾಜಕಾರಣಿಗಳ ಮತ್ತು ಸರಕಾರದ ವರ್ತನೆಗಳನ್ನು ಮನದಟ್ಟು ಮಾಡಿಕೊಂಡು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯನ್ನು ಅಂಗೀಕರಿಸುವರು ಮತ್ತು ಈ ದೌರ್ಜನ್ಯಗಳಲ್ಲಿ ಅವರು ಭಾಗಿಗಳಾಗಲಾರರು. ಆದರೆ ಅಲ್ಲಾಹನ ವಚನಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಅಲ್ಲಾಹನು ನೇಮಿಸಿದ ಮಹಾನುಭಾವರ ಆವಶ್ಯಕತೆ ಇದೆ. ಆದರೆ ಈ ಜನರು ದೇವನಿಂದ ನೇಮಿಸಲ್ಪಟ್ಟ ಮಹಾನುಭಾವರನ್ನು ಅಂಗೀಕರಿಸದ ಕಾರಣ ತಮ್ಮ ದೌರ್ಜನ್ಯಕರ ವರ್ತನೆಗಳಲ್ಲಿ ಮಿತಿಮೀರುತ್ತಿದ್ದಾರೆ.

ಮೇಲೆ ಉಲ್ಲೇಖಿಸಿದ ವಚನಗಳಲ್ಲಿ ನಕ್ಷತ್ರಗಳ ರಾಶಿಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಖಗೋಳ ಶಾಸ್ತ್ರಜ್ಞರು ಹನ್ನೆರಡು ರಾಶಿಗಳ ಬಗ್ಗೆ ಹೇಳುತ್ತಾರೆ. ಈ ವಚನಗಳಲ್ಲಿ ಇಸ್ಲಾಮ್‌ನಲ್ಲಿ ಆಗಮಿಸಿದ ಹನ್ನೆರಡು ಮುಜದ್ದಿದರ ಬಗ್ಗೆ ದೃಷ್ಟಾಂತ ರೂಪದಲ್ಲಿ ಸೂಚಿಸಲಾಗಿದೆ. ಇಸ್ಲಾಮಿನ ಸೂರ್ಯ ಅಸ್ತಮಾನಗೊಂಡಾಗ ಅವರು ಅದಕ್ಕೆ ಬೆಳಕು ನೀಡಿದರು. ಹದೀಸುಗಳು ಸಹ ಈ ಕಾಲಘಟ್ಟದ ಬಗ್ಗೆ ಪ್ರಸ್ತಾಪಿಸುತ್ತವೆ. ಇಸ್ಲಾಮ್ ಕಳೆಗುಂದಿದ ಕಾಲದಲ್ಲಿ ಅದಕ್ಕೆ ಬೆಳಕು ನೀಡಲು ಹನ್ನೆರಡು ಮುಜದ್ದಿದರು ಆಗಮಿಸಿದರೆಂದು ಮುಸ್ಲಿಮರು ನಂಬುತ್ತಾರಾದರೂ "ವಾಗ್ದತ್ತ ದಿನದಾಣೆ"(ವಲ್ ಯೌಮಿಲ್ ಮೌಊದ್) ಎಂಬ ವಚನದಲ್ಲಿ ಹದಿಮೂರನೆಯ ಶತಮಾನದಲ್ಲಿ ಆಗಮಿಸಲಿದ್ದ ವಾಗ್ದತ್ತ ಮಸೀಹರ ಬಗ್ಗೆ ಸೂಚಿಸಲಾಗಿದ್ದರೂ ಅವರು ಆಗಮಿಸಿದಾಗ ಅವರನ್ನು ತಿರಸ್ಕರಿಸಿದುದು ವಿಚಿತ್ರವಾಗಿದೆ. ಪ್ರತಿಯೊಂದು ಶತಮಾನದಲ್ಲಿ ಆಗಮಿಸಲಿದ್ದ ಮುಜದ್ದಿದರ ಬಗ್ಗೆ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ವಚನಗಳಲ್ಲಿ ಮಾತ್ರ ಪ್ರಸ್ತಾವಗಳಿವೆ. ಆದರೆ ವಾಗ್ದತ್ತ ಮಸೀಹರು ಆಗಮಿಸುವ ಬಗ್ಗೆ ಪವಿತ್ರ ಖುರ್‌ಆನ್ ವಿಶಿಷ್ಟವಾಗಿ ಸೂಚಿಸಿದೆ ಮಾತ್ರವಲ್ಲ ಅವರ ಆಗಮನದ ಕಾಲದ ಚಿಹ್ನೆಯಾಗಿ ಅನೇಕ ದೃಷ್ಟಾಂತಗಳನ್ನು ವಿಶಿಷ್ಟತಃ ಸೂರ್ಯಚಂದ್ರ ಗ್ರಹಣಗಳು ಸಂಭವಿಸುವ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಸಹ ಭವಿಷ್ಯ ನುಡಿದಿರುವರು. ಈ ಭವಿಷ್ಯವಾಣಿಗಳು ಹಗಲು

ಬೆಳಕಿನ ಹಾಗೆ ಸ್ಪಷ್ಟವಾಗಿ ಈಡೇರಿದ್ದರೂ ಈ ಜನರು ವಾಗ್ದತ್ತ ಮಸೀಹರನ್ನು ನಂಬುವುದಿಲ್ಲ. ಅವರು ಆಗಮಿಸಿದ ನಂತರ ಈ ಜನರು "ನಮಗೆ ಯಾವುದೇ ವಾಗ್ದತ್ತ ಮಹಾನುಭಾವರ ಆಗಮನದ ಆವಶ್ಯಕತೆ ಇಲ್ಲ" ಎಂದು ಹೇಳಲು ತೊಡಗಿದ್ದಾರೆ. ಇದಕ್ಕೆ ಕಾರಣವೇನೆಂದರೆ ಮೌಲವಿಗಳು ತಮ್ಮ ಅಧಿಕಾರದ ವೇದಿಕೆಗಳನ್ನು ಕಳೆದುಕೊಳ್ಳುವ ಭಯವನ್ನು ಮತ್ತು ತಮ್ಮ ಜ್ಞಾನ ಹೀನತೆ ಜನರಿಗೆ ತಿಳಿಯುವುದೆಂಬ ಭಯವನ್ನು ಹೊಂದಿದ್ದಾರೆ.

"ಹಿಜರಿ 1290ರಲ್ಲಿಯೇ ನನಗೆ ದೇವವಾಣಿ ಅವತೀರ್ಣವಾಗಲು ತೊಡಗಿದುದು ಅಲ್ಲಾಹನ ಒಂದು ದೃಷ್ಟಾಂತವಾಗಿದೆ". ಎಂದು ಹಝ್ರತ್ ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮರು ಹೇಳಿರುವರು. ಅನಂತರ ಅವರು ತಾನು ಅಲ್ಲಾಹನಿಂದ ನೇಮಿಸಲ್ಪಟ್ಟ ವಾಗ್ದತ್ತ ಮಸೀಹ್ ಆಗಿರುವೆನು ಎಂದು ಘೋಷಿಸಿದರು. ಅಲ್ಲಾಹನು ಪ್ರಕಟಿಸಿದ ದೃಷ್ಟಾಂತಗಳು ಅವರ ವಾದ ಸತ್ಯವೆಂದು ಸಾಬೀತುಗೊಳಿಸಿದುವು. ಇವುಗಳ ಬಗ್ಗೆ ಹೆಚ್ಚಿನ ವಿವರಣೆಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರೆದ ಗ್ರಂಥಗಳಿಂದಲೂ ಜಮಾಅತಿನ ಇತರ ಗ್ರಂಥಗಳಿಂದಲೂ ತಿಳಿಯಬಹುದು. ಅಲ್ಲಾಹನಿಂದ ಅವರಿಗೆ ಲಭಿಸಿದ ನೆರವು ಈ ಕಾಲಘಟ್ಟ ವಾಗ್ದತ್ತ ಮಸೀಹರ ಕಾಲಘಟ್ಟವೆಂದು ಸಾಕ್ಷ್ಯ ನೀಡುತ್ತವೆ. ಈ ಕಾಲಘಟ್ಟದಲ್ಲಿ ಇಸ್ಲಾಮಿನ ಪುನಶ್ಚೇತನ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ಸತ್ಯವಿಶ್ವಾಸಿಗಳ ಮೂಲಕ ಸಂಭವಿಸುವುದೆಂದೂ ಅದಕ್ಕೋಸ್ಕರ ಅವರು ಬೃಹತ್ ಬಲಿದಾನಗಳನ್ನು ಮಾಡಬೇಕಾಗಬಹುದೆಂದೂ ಅಲ್ಲಾಹನ ವಚನಗಳು ಸೂಚಿಸುತ್ತವೆ.

ಅಲ್ಲಾಹನು ಮೇಲೆ ಉಲ್ಲೇಖಿಸಿದ ವಚನಗಳಲ್ಲಿ ಹೇಳಿರುವನು. "ಕಂದಕದ ಜನರು ನಾಶ ಹೊಂದಲಿ– ಇಂಧನದಿಂದ ಬೆಂಕಿಯನ್ನು ಪ್ರಜ್ವಲಗೊಳಿಸುವವರು. ಅವರು ಅದರ ಸಮೀಪ ಕುಳಿತುಕೊಂಡಿರುವಾಗ, ಸತ್ಯವಿಶ್ವಾಸಿಗಳಿಗೆ ಅವರು ಏನು ಮಾಡಿದ್ದಾರೆಂಬುದಕ್ಕೆ ಅವರೇ ಸಾಕ್ಷಿಗಳಾಗಿದ್ದಾರೆ."

ಮೇಲಿನ ವಚನಗಳಲ್ಲಿ ಶತ್ರುಗಳು ಹೇಗೆ ದೌರ್ಜನ್ಯ ಮಾಡುವರೆಂಬುದನ್ನು ಚಿತ್ರಿಸಲಾಗಿದೆ. ಆದರೆ ಅವರ ಅಂತಿಮ ಗತಿ ದಾರುಣವಾಗಿರುವುದು. ಅವರು ನಾಶಗೊಳಿಸಲ್ಪಡುವರು. ಸತ್ಯವಿಶ್ವಾಸಿಗಳು ಶತ್ರುಗಳಿಂದ ದೀರ್ಘಕಾಲ ದೌರ್ಜನ್ಯಗಳಿಗೆ ಪಾತ್ರರಾಗುವರು ಮತ್ತು ಅವರು ಆ ದೌರ್ಜನ್ಯಗಳನ್ನು ಸಹಿಸಬೇಕಾಗುವುದು. ಇಸ್ಲಾಮ್ ಅಭಿವೃದ್ಧಿಗೊಳ್ಳಲು ನಮ್ಮಿಂದ ನಮ್ಮ ಜೀವದ ಅರ್ಪಣೆಯನ್ನೇ ಆವಶ್ಯಪಡುತ್ತದೆ ಎಂದು ವಾಗ್ದತ್ತ ಮಸೀಹ್ ಅಲೈಹಿಸ್ಸಲಾಮರು ಹೇಳಿರುವರು.

ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನಿನ ವಚನಗಳು ನಮಗೆ ತಿಳಿಸುವುದೇನೆಂದರೆ ಶತ್ರುಗಳು ಬಿರುಸಾಗಿ ಬೆಂಕಿ ಹೊತ್ತಿಸುವರು. ಅದು ಪ್ರಜ್ವಲಿಸುವಂತಾಗಲು ಅವರು ಅದಕ್ಕೆ ಮತ್ತೂ ಇಂಧನ ಸುರಿಯುತ್ತಾ ಹೋಗುವರು. ಅವರು ಸತ್ಯವಿಶ್ವಾಸಿಗಳನ್ನು ಹಿಡಿಗೂಡುವರು. ಸತ್ಯವಿಶ್ವಾಸಿಗಳು ತೀವ್ರವಾಗಿ ನೋವು ಅನುಭವಿಸುವರು. ಶತ್ರುಗಳು ತಾವು ಸತ್ಯ ವಿಶ್ವಾಸಿಗಳನ್ನು ಎಲ್ಲಾ ದಿಕ್ಕುಗಳಿಂದಲೂ ಸುತ್ತುವರಿದಿದ್ದೇವೆ ಎಂದು ಭಾವಿಸುವರಾದರೂ, ಸತ್ಯವಿಶ್ವಾಸಿಗಳು ದೀರ್ಘಕಾಲ ಈ ನೋವನ್ನು ಅನುಭವಿಸುವರಾದರೂ, ಕೊನೆಗೆ ಶತ್ರುಗಳು ನಾಶಗೊಳಿಸಲ್ಪಡುವರು.

ಪಾಕಿಸ್ತಾನದಲ್ಲಿ ಶತ್ರುಗಳು ಅಹ್ಮದಿಯರನ್ನು ಸುಟ್ಟು ಹಾಕುವಾಗ ಅಲ್ಲಿನ ಪೋಲಿಸರು ಸಹ ಅದರಲ್ಲಿ ಭಾಗಿಗಳಾದರು. ಸತ್ಯವಿಶ್ವಾಸಿಗಳನ್ನು ಸುಡುವುದರಲ್ಲಿ ಅವರೆಲ್ಲ ಆಹ್ಲಾದ ಭರಿತರಾದರು ಎಂದು ನಾವು ಕಂಡೆವು.

ಸತ್ಯವಿಶ್ವಾಸಿಗಳ ವಿರೋಧಿಗಳು ಬೆಂಕಿ ಹೊತ್ತಿಸಿ ವಿಶ್ವಾಸಿಗಳನ್ನು ಸುತ್ತುವರಿಯುವರು ಎಂದು ಪವಿತ್ರ ಖುರ್‌ಆನ್ ವಚನಗಳು ಒಂದು ಭವಿಷ್ಯವಾಣಿಯ ರೂಪದಲ್ಲಿ ಸೂಚಿಸುತ್ತವೆ. ನಾವು ಸತ್ಯವಿಶ್ವಾಸಿಗಳೆಂದೂ ಬೆಂಕಿ ಹೊತ್ತಿಸಿ ನಮ್ಮನ್ನು ಸುತ್ತುವರಿಯುವವರು ಶತ್ರುಪಕ್ಷದವರೆಂದೂ ಪವಿತ್ರ ಖುರ್‌ಆನ್ ವಚನಗಳು ಸೂಚಿಸುತ್ತವೆ.

ಪಾಕಿಸ್ತಾನದ ಗುಜ್ರಾನ್‌ವಾಲಾದಲ್ಲಿ ನಡೆದ ಘಟನೆ ಹೀಗಿದೆ: ಹನ್ನೊಂದು ಮಹಿಳೆಯರನ್ನೂ ಮಕ್ಕಳನ್ನೂ ಈ ಶತ್ರುಗಳು ಒಂದು ಕೋಣೆಯಲ್ಲಿ ಕೂಡಿಹಾಕಿ ಹೊರಗಿನಿಂದ ಬಾಗಿಲು ಮುಚ್ಚಿ ಬೆಂಕಿ ಹೊತ್ತಿಸಿದರು. ಹೊರಗೆ ಶತ್ರುಗಳು ಅವರನ್ನು ಅಪಹಾಸ್ಯ ಮಾಡುತ್ತಾ ಘೋಷಣೆ ಕೂಗುತ್ತಾ ನೃತ್ಯ ಮಾಡುತ್ತಿದ್ದರು. ಈ ಘಟನೆಗೆ ಸಂಬಂಧಿಸಿದ ವೀಡಿಯೋಗಳಿಂದ ತಿಳಿಯುವುದೇನೆಂದರೆ ಈ ದೌರ್ಜನ್ಯ ಮಾಡಿದವರು ನಿರ್ಲಜ್ಜರೂ ಅತ್ಯಂತ ಕ್ರೂರಿಗಳೂ ಆಗಿದ್ದರು. ಅವರ ಘೋಷಣೆಗಳು ಇದನ್ನೇ ಸೂಚಿಸುತ್ತಿದ್ದುವು. ಅನಂತರ ಅಲ್ಲಿನ ಮೌಲವಿ ಹೀಗೆ ಹೇಳಿದುದಾಗಿ ತಿಳಿದು ಬಂದಿದೆ: "ಇದಕ್ಕಿಂತ ಭೀಕರವಾದುದನ್ನು ಮುಂದೆ ನಾವು ಮಾಡಲಿದ್ದೇವೆ" ಆ ವ್ಯಕ್ತಿ ಇಂತಹ ಕೃತ್ಯ ನಡೆಸುವ ಬಗ್ಗೆ ಇತರರಿಂದ ವಾಗ್ದಾನಗಳನ್ನು ಪಡೆದುದಾಗಿಯೂ ವರದಿಯಾಗಿದೆ.

ಈ ಘಟನೆ ಸಂಭವಿಸಿದ ಬಳಿಕವೂ ಶತ್ರುಗಳು ತಮ್ಮ ಕೃತ್ಯಗಳನ್ನು ಮುಂದುವರಿಸಲಾರರು ಎಂದು ಹೇಳುವಂತಿಲ್ಲ. ಅವರಲ್ಲಿ ಎಂತಹ ಬರ್ಬರ ಕ್ರೂರ ಜನರಿದ್ದಾರೆಂದರೆ ಅವರು ಟ್ವಿಟ್ಟರ್ ಮಾಧ್ಯಮ ಮೂಲಕ ಹೇಳಿದರು: ಅಹ್ಮದಿಯರಿಗೆ ಸಂಭವಿಸಿದುದು ಉತ್ತಮವೇ ಆಗಿದೆ. ಅವರಿಗೆ ಹೀಗೆಯೇ ಆಗಬೇಕಾಗಿತ್ತು. ಆದರೆ ಅತ್ಯಂತ ದುಃಖಕರವಾದುದೇನೆಂದರೆ, ಈ ಕ್ರೂರಿಗಳು ಇಂತಹ ಕೃತ್ಯಗಳನ್ನು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ನಾಮದಲ್ಲಿ ಮಾಡುತ್ತಿದ್ದಾರೆ ಎಂಬುದು.

ಪವಿತ್ರ ಖುರ್‌ಆನ್ ವಚನದಲ್ಲಿ "ಅವರು ಅದರ ಸಮೀಪ ಕುಳಿತುಕೊಂಡಿರುವಾಗ" ಎಂದು ಹೇಳಿರುವುದರಿಂದ ಅವರ ಹಿಂಸಾಚಾರ ದೀರ್ಘಕಾಲ ಮುಂದುವರಿಯುವುದು ಎಂದು ತಿಳಿಯುತ್ತದೆ. ಹೊಸ ಶತ್ರುಗಳು ಸಹ ಮುಂದೆ ಬರುವರು. ಆದರೆ ಅವರ ಅಂತಿಮ ಗತಿಯನ್ನು ಸಹ ಅಲ್ಲಾಹನು ಸೂಚಿಸಿದ್ದಾನೆ. ಅವರು ಸುಡಲ್ಪಡುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳನ್ನು ಖಂಡಿಸಲು ಆವಶ್ಯಕವಾದ ಸಾಕ್ಷ್ಯಾಧಾರಗಳು ಮುಸ್ಲಿಮ್ ಮತಪಂಡಿತರ ಬಳಿಯಲ್ಲಿ ಇರುವುದಿಲ್ಲವೆಂದು ಅವರಿಗೆ ಗೊತ್ತು. ಆದುದರಿಂದ ಅವರು ಸುಳ್ಳುಗಳನ್ನು ಸೃಷ್ಟಿಸಿ ಬೆಂಕಿ ಹೊತ್ತಿಸುತ್ತಾರೆ ಮತ್ತು ಜನರನ್ನು ತಮ್ಮೊಂದಿಗೆ ಸೇರಿಸಿಕೊಳ್ಳುತ್ತಾರೆ. ಅವರು ಕೆಲವು ಸಾರಿ ನಿಜವಾದ ಬೆಂಕಿಯನ್ನು ಹೊತ್ತಿಸುತ್ತಾರೆ ಮತ್ತು ಕೆಲವು ಸಾರಿ

ಶತ್ರುತ್ವದ ಬೆಂಕಿಯನ್ನು ಪ್ರಜ್ವಲಿಸುತ್ತಾರೆ. ಪಾಕಿಸ್ತಾನದಲ್ಲಿ ಅಹ್ಮದಿಯ್ಯತ್ತಿನ ವಿರುದ್ಧ ಸುಳ್ಳು ಆರೋಪಗಳನ್ನು ಎಲ್ಲೆಡೆ ಹರಡಲಾಗುತ್ತದೆ. ಸರಕಾರಿ ಕಛೇರಿಗಳಲ್ಲೂ ಹೈಕೋರ್ಟ್‌ನಲ್ಲಿ ಸಹ ಇಂತಹ ಬ್ಯಾನರ್‌ಗಳನ್ನು ಪ್ರದರ್ಶಿಸಲಾಗುತ್ತಿದೆ. ಅಹ್ಮದಿಯತ್ತಿನೊಂದಿಗೆ ದೂರದ ಸಂಬಂಧ ಸಹ ಇಲ್ಲದಂತಹ ಆರೋಪಗಳನ್ನು ಮಾಡಲಾಗುತ್ತಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಹ್ಮದಿಯರೊಂದಿಗೆ ಹೀಗೆ ಹೇಳಿದ್ದಾರೆ: "ನಿಮ್ಮನ್ನು ಅಲ್ಲಾಹನು ನಾಶವಾಗಲು ಬಿಡುವನು ಎಂದು ನೀವು ಭಾವಿಸಬೇಡಿರಿ. ನೀವು ಅಲ್ಲಾಹನ ಕೈಗಳಿಂದ ಭೂಮಿಯಲ್ಲಿ ಬಿತ್ತಲ್ಪಟ್ಟ ಬೀಜವಾಗಿರುವಿರಿ. ಈ ಬೀಜ ಮೊಳಕೆ ಒಡೆದು ಘಟವೃಕ್ಷವಾಗಿ ಬೆಳೆದು ಅದರ ಶಾಖೆಗಳು ಪ್ರತಿಯೊಂದು ದಿಕ್ಕಿಗೂ ಚಾಚುವುದೆಂದು ಅಲ್ಲಾಹನು ವಾಗ್ದಾನ ಮಾಡಿರುವನು. ಅಲ್ಲಾಹನ ಭವಿಷ್ಯವಾಣಿಯನ್ನು ನಂಬುವವನು ಭಾಗ್ಯಶಾಲಿಯಾಗಿದ್ದಾನೆ. ಅವನು ಮಧ್ಯಕಾಲದ ಪರೀಕ್ಷೆಗಳನ್ನು ಭಯಪಡಲಾರನು."

ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತಿನ ವೃಕ್ಷ ಬೆಳೆಯುವುದು. ಇದಕ್ಕೋಸ್ಕರ ಜಮಾಅತಿನ ಜನರು ಬಲಿದಾನಗಳನ್ನು ಅರ್ಪಿಸಬೇಕಾಗುವುದು. ಬೆಂಕಿ ಹೊತ್ತಿಸುವವರು ಆ ಬೆಂಕಿಯಿಂದಲೇ ಸುಡಲ್ಪಡುವರು. ಅಥವಾ ಅಲ್ಲಾಹನು ಬೇರೆ ರೀತಿಯಲ್ಲಿ ಅವರನ್ನು ನಾಶಮಾಡುವನು.

"ಕಂದಕದ ಜನರು ನಾಶ ಹೊಂದಲಿ" ಎಂಬ ಪವಿತ್ರ ಖುರ್‌ಆನಿನ ವಚನ ಒಂದು ಭವಿಷ್ಯವಾಣಿಯಾಗಿದೆ. ಈ ಭವಿಷ್ಯವಾಣಿ ಅಹ್ಮದಿಯಾ ಜಮಾಅತಿನ ಪರವಾಗಿ ಅನೇಕ ಬಾರಿ ಈಡೇರಿದೆ ಇನ್ನು ಮುಂದೆ ಸಹ ಈಡೇರುತ್ತಾ ಇರುವುದು. ಆದರೆ ಶತ್ರುಗಳು ತಮ್ಮ ವಿರೋಧ ಕೃತ್ಯಗಳನ್ನು ನಿಲ್ಲಿಸಲಾರರು ಅವರು ತಮ್ಮ ಹಿಂಸಾಚಾರ ಮುಂದುವರಿಸುವರು. ಆದರೂ إِنْ شَاءَ اللهُ ಅಹ್ಮದಿಯಾ ಜಮಾಅತ್ ಅಭಿವೃದ್ಧಿ ಹೊಂದುತ್ತಾ ಹೋಗುವುದು. ಅಹ್ಮದಿಯಾ ಜಮಾಅತಿನ ಕಳೆದ 125 ವರ್ಷಗಳ ಚರಿತ್ರೆಯಿಂದ ಶತ್ರುಗಳು ಪಾಠಕಲಿಯಬೇಕಿತ್ತು. ಈ ಜಮಾಅತ್ ಮನುಷ್ಯ ನಿರ್ಮಿತವಲ್ಲ, ಬದಲಾಗಿ ಅದು ಅಲ್ಲಾಹನಿಂದಲೇ ಸ್ಥಾಪಿಸಲ್ಪಟ್ಟದ್ದು ಎಂದು ಅವರು ಮನವರಿಕೆ ಮಾಡಬೇಕಾಗಿತ್ತು. ಈ ಜಮಾಅತನ್ನು ತಡೆಗಟ್ಟಿದರೆ ಅಲ್ಲಾಹನ ಕೋಪಕ್ಕೆ ಪಾತ್ರರಾಗುವೆವು ಎಂದು ಅವರು ತಿಳಿಯಬೇಕಾಗಿತ್ತು. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ವಚನಗಳು ಅವರ ವಾದವನ್ನು ಬೆಂಬಲಿಸುವುದಿಲ್ಲ ಎಂದು ಅವರಿಗೆ ತಿಳಿದಿದೆ.

ನಾನು ಹಿಂದೆ ವಿವರಿಸಿದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಗಳ ಚರಿತ್ರೆಗಳಿಂದ ಮತ್ತು ಇಂದಿನ ಕಾಲದಲ್ಲಿ ಬೈಅತ್ ಮಾಡಿದವರ ಹೇಳಿಕೆಗಳಿಂದ ತಿಳಿಯುವುದೇನೆಂದರೆ ಮುಸ್ಲಿಮ್ ಮತಪಂಡಿತರು ತಮ್ಮ ಅನುಯಾಯಿಗಳೊಂದಿಗೆ ಹೀಗೆ ಹೇಳುತ್ತಾರೆ: ಖಾದಿಯಾನಿಗಳೊಂದಿಗೆ ಅವರ ವಿಶ್ವಾಸಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನಿನ ಆಧಾರದಲ್ಲಿ ಮಾತನಾಡಬೇಡಿರಿ. ಏಕೆಂದರೆ ಖಾದಿಯಾನಿಗಳು ಈಸಾ ಮಸೀಹರು ಮೃತರಾದರೆಂದು ಖುರ್‌ಆನ್ ಮೂಲಕ ಸಾಬೀತುಪಡಿಸುವರು. ಅವರು ವಾಗ್ದತ್ತ ಮಸೀಹರ ಸತ್ಯವನ್ನು ಸಹ ಅದರ ಮೂಲಕ ಸಾಬೀತುಗೊಳಿಸಬಲ್ಲರು. ಆದುದರಿಂದ ಅವರೊಂದಿಗೆ ಚರ್ಚಿಸಬೇಡಿರಿ.

ತಮ್ಮ ಬಳಿ ಯಾವ ಸಾಕ್ಷ್ಯಾಧಾರವೂ ಇಲ್ಲ ಎಂದು ಆ ಮತ ಪಂಡಿತರಿಗೆ ತಿಳಿದಿದೆ. ಅವರು ಕೇವಲ ಹಟಮಾರಿಗಳಾಗಿದ್ದಾರೆ. ಅವರು ಸಾಮಾನ್ಯ ಜನರಿಗೆ ಮಂಕುಬೂದಿ ಎರಚುತ್ತಾರೆ.

ಒಬ್ಬ ಪಾಕಿಸ್ತಾನಿ ಮೌಲವಿ ಒಂದು ಸರಕಾರಿ ಟಿ.ವಿ. ಚಾನಲ್ ಮೂಲಕ ಭಾಷಣ ಮಾಡುತ್ತಾ ಅಹ್ಮದಿಯರ ಹೆಸರು ಹೇಳದೆ ಹೀಗೆ ಹೇಳಿದರು: ಅಲ್ಪ ಸಂಖ್ಯಾತರು ಬಹು ಸಂಖ್ಯಾತರ ಭಾವನೆಗಳ ಬಗ್ಗೆ ಜಾಗರೂಕರಾಗಿರಬೇಕು.

ನೋಡಿರಿ ಈ ಜನರು ದೌರ್ಜನ್ಯಗಾರರಾಗಿದ್ದೂ ಸ್ವತಃ ಅವರೇ ತೀರ್ಪು ನೀಡುತ್ತಾರೆ. ಅವರಿಗೆ ರಾಜಕೀಯ ಬೆಂಬಲವಿದೆ. ಸರಕಾರ ಅವರ ಮಾತುಗಳನ್ನು ಅಂಗೀಕರಿಸುತ್ತದೆ. ಆದರೆ ಅವರಿಗೆ ತಮ್ಮ ಅಂತಿಮ ಗತಿಯ ಬಗ್ಗೆ ತಿಳಿದಿಲ್ಲ. ಅಲ್ಲಾಹನು ಹೇಳುತ್ತಾನೆ:

إِنَّ الَّذِينَ فَتَنُوا الْمُؤْمِنِينَ وَالْمُؤْمِنَاتِ ثُمَّ لَمْ يَتُوبُوا فَلَهُمْ عَذَابُ جَهَنَّمَ وَلَهُمْ عَذَابُ الْحَرِيقِ ⑩

*ಇನ್ನಲ್ಲದೀನ ಫತನುಲ್ ಮೂಮಿನೀನ ವಲ್ ಮೂಮಿನಾತಿ ಸುಮ್ಮ ಲಮ್ ಯತೂಬೂ ಫಲಹುಂ ಅದಾಬು ಜಹನ್ನಮ ವಲಹುಂ ಅದಾಬುಲ್ ಹರೀಖ್*

**"ಯಾರು ಸತ್ಯ ವಿಶ್ವಾಸಿಗಳಾದ ಪುರುಷರನ್ನೂ ಸತ್ಯವಿಶ್ವಾಸಿನಿಯರಾದ ಸ್ತ್ರೀಯರನ್ನೂ ಪೀಡಿಸುತ್ತಾರೋ ಹಾಗೂ ಆ ಬಗ್ಗೆ ಪಶ್ಚಾತ್ತಾಪ ಪಡುವುದಿಲ್ಲವೋ, ಖಂಡಿತವಾಗಿಯೂ ಅವರಿಗೆ ನರಕ ಶಿಕ್ಷೆಯಿದೆ. ಮತ್ತು ಅವರಿಗೆ ಬೆಂಕಿಯ ಶಿಕ್ಷೆಯೂ ವಿಧಿಸಲ್ಪಟ್ಟಿದೆ."**

ಯಾರು ಸತ್ಯವಿಶ್ವಾಸಿಗಳಿಗೂ ಸತ್ಯವಿಶ್ವಾಸಿನಿಯರಿಗೂ ಯಾತನೆ ನೀಡುತ್ತಾರೋ ಅಥವಾ ಅದರ ಪ್ರಯತ್ನದಲ್ಲಿರುವರೋ ಹಾಗೂ ಬೆಂಕಿ ಹೊತ್ತಿಸಿ ಅವರ ಸಹಾಯಕ್ಕಾಗಿ ಯಾರೂ ಬರದಂತೆ ಅವರ ಸುತ್ತಲೂ ಕಾವಲು ಕಾಯುತ್ತಾರೋ ಅಂಥವರಿಗೆ ಉರಿಯುವ ಶಿಕ್ಷೆಯಿದೆ ಎಂದು ಈ ವಚನಗಳಲ್ಲಿ ಅಲ್ಲಾಹನು ಹೇಳುತ್ತಾನೆ.

ಅಹ್ಮದಿಯರು **ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಶರೀಅತ್ ಹೊಂದಿದ ಅಂತಿಮ ನಬಿ ಎಂದು ನಂಬುವುದಿಲ್ಲ, ಅವರನ್ನು ನಿಂದಿಸುತ್ತಾರೆ** ಎಂದು ಹೇಳಿ ಅಹ್ಮದಿಯರ ಶತ್ರುಗಳಾದ ಮುಸ್ಲಿಮ್ ಮತ ಪಂಡಿತರು ಜನರನ್ನು ರೊಚ್ಚಿಗೆಬ್ಬಿಸುತ್ತಾರೆ. ಈ ಸುಳ್ಳು ದೋಷಾರೋಪ ಅಹ್ಮದಿಯರಿಗೆ ಅಸಹನೀಯವಾಗಿದೆ ಮತ್ತು ನಿರಾಧಾರವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಗೌರವವನ್ನು ಎತ್ತಿ ಹಿಡಿಯಲು ಅಹ್ಮದಿಯರು ಲೋಕದಾದ್ಯಂತ ಪ್ರಯತ್ನಿಸುತ್ತಿದ್ದಾರೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಗೌರವವು ಆಕ್ರಮಿಸಲ್ಪಡುವಾಗ ಅದಕ್ಕೆ ಉತ್ತರ ನೀಡಲು ಅಹ್ಮದಿಯರು ಎಲ್ಲರಿಗಿಂತಲೂ ಮುಂದಾಗಿರುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ವಿರುದ್ಧ ಮಾಡಲಾಗುವ ನಿಸ್ಸಾರ

ಆಕ್ಷೇಪಗಳನ್ನು ಸಹ ಓರ್ವ ಅಹ್ಮದಿ ಸಹಿಸಲಾರ. ಅವರ ಗೌರವ ಕಾಪಾಡಲು ಜೀವಾರ್ಪಣೆ ಮಾಡಲು ಸಹ ಸಿದ್ಧನಾಗಿರುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಇದನ್ನು ಕಲಿಸಿರುವರು. ನಮ್ಮ ಹೃದಯಗಳಲ್ಲೇನಿದೆ ಮತ್ತು ನಮ್ಮ ವರ್ತನೆ ಹೇಗಿದೆ ಎನ್ನವುದು ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ. ಇದೇ ಕಾರಣದಿಂದ ಅಲ್ಲಾಹನು ಜಮಾಅತಿಗೆ ಅಭಿವೃದ್ಧಿ ಮೇಲೆ ಅಭಿವೃದ್ಧಿ ನೀಡುತ್ತಿದ್ದಾನೆ.

ಶತ್ರುಗಳಿಗೆ ಬಾಹ್ಯಾವಾಗಿ ಶಿಕ್ಷೆ ಲಭಿಸುವುದು ಮಾತ್ರವಲ್ಲ ಅವರು ನರಕಾಗ್ನಿಗೆ ಸಹ ಪಾತ್ರರಾಗುವರು. ನಮ್ಮ ಜೀವಕ್ಕಿಂತಲೂ ನಮಗೆ ಪ್ರಿಯರಾದವರ ಬಗ್ಗೆ ಶತ್ರುಗಳು ಸುಳ್ಳು ಪ್ರಚಾರಮಾಡುತ್ತಾರೆ. ಅವರು ನಮ್ಮ ಹೃದಯಗಳನ್ನು ಸುಡಲು ಬಯಸುತ್ತಾರೆ. ಆದರೆ ಜಮಾಅತಿನ ಪ್ರಗತಿಯ ಕಾರಣ ಅವರು ಅಸೂಯೆಯ ಅಗ್ನಿಯಿಂದ ಸುಡಲ್ಪಡುತ್ತಿದ್ದಾರೆ. ಅಹ್ಮದಿ ಪುರುಷ, ಮಹಿಳೆ ಮತ್ತು ಮಕ್ಕಳು ಶತ್ರುಗಳ ಬಗ್ಗೆ ಭಯಬೀತರಾಗದೆ ದೃಢ ವಿಶ್ವಾಸಿಗಳಾಗಿರುವುದರಿಂದಲೂ ಶತ್ರುಗಳಿಗೆ ಹೆಚ್ಚಿನ ಆತಂಕವಾಗುತ್ತಿದೆ.

ಗುಜ್ರಾನ್‌ವಾಲಾದ ಅಹ್ಮದಿಯರು 1974ರ ಗಲಭೆ ದೊಂಬಿಗಳ ಸಂದರ್ಭದಲ್ಲಿ ಸಹ ಆದರ್ಶಮಯವಾಗಿ ವರ್ತಿಸಿದ್ದರು. ಅವರು ಈಗ ಬಲಿದಾನದ ಹೊಸ ಉದಾಹರಣೆ ಸ್ಥಾಪಿಸಿದ್ದಾರೆ. ಏಳು ತಿಂಗಳು ಪ್ರಾಯದ ಒಂದು ಹೆಣ್ಣು ಮಗು, ಎಂಟು ವರ್ಷದ ಒಬ್ಬ ಹುಡುಗಿ ಮತ್ತು ಒಬ್ಬ ಮಹಿಳೆ ಜೀವ ಬಲಿದಾನದ ಉತ್ತಮ ಮಾದರಿಯನ್ನು ಪ್ರದರ್ಶಿಸಿದರು. ಎರಡು ತಿಂಗಳ ನಂತರ ಜನಿಸಲಿರುವ ಒಬ್ಬ ಶಿಶು ಸಹ ಬಲಿದಾನ ನೀಡಿತು. ಅಲ್ಲಾಹನು ದೌರ್ಜನ್ಯಗಾರರಾದ ಬೆಂಕಿ ಹೊತ್ತಿಸುವ ಶತ್ರುಗಳ ಶಿಕ್ಷೆಯ ಬಗ್ಗೆ ಹೇಳಿದ ನಂತರ ಸತ್ಯ ವಿಶ್ವಾಸಿಗಳಿಗೆ ಖಾತರಿ ನೀಡಿದ್ದಾನೆ. "ಯಾರು ಸತ್ಯ ವಿಶ್ವಾಸಹೊಂದಿ ಸತ್ಕರ್ಮ ನಿರತರಾಗಿರುವರೋ ಅವರಿಗೆ ಕೆಳಬದಿಯಲ್ಲಿ ನದಿಗಳು ಹರಿಯುವ ಸ್ವರ್ಗೀಯ ತೋಟಗಳಿವೆ. ಅದು ಮಹಾ ವಿಜಯವಾಗಿದೆ."

ಶತ್ರುಗಳು ಅನೇಕ ಕಡೆ ಬೆಂಕಿ ಹೊತ್ತಿಸಿ ಅದನ್ನು ನೋಡುತ್ತಾ ಇದ್ದರು. ಅಗ್ನಿಶಾಮಕ ಸೇನೆಗೆ ಅವರು ಕಲ್ಲು ಹೊಡೆದುದಾಗಿ ಮತ್ತು ಅಂಬುಲೆನ್ಸ್ ವಾಹನಗಳನ್ನು ಅಲ್ಲಿಗೆ ಬರದಂತೆ ತಡೆದುದಾಗಿ ವರದಿಗಳು ಬಂದಿವೆ.

ಜರ್ಮನಿಯಿಂದ ಒಬ್ಬ ಮಹಿಳೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಲಭಿಸಿದ ದೇವವಾಣಿ "ಬೆಂಕಿಯಿಂದ ಬೆದರಿಸಬೇಡ. ಬೆಂಕಿ ನಮ್ಮ ಸೇವಕ, ಮಾತ್ರವಲ್ಲ ನಮ್ಮ ಸೇವಕರ ಸೇವಕ" ಇದನ್ನು ಉಲ್ಲೇಖಿಸಿ ಬರೆದಿದ್ದರು. ಅವರು ತನ್ನ ಪತ್ರದಲ್ಲಿ ಆ ಬಗ್ಗೆ ವಿವರಣೆ ಏನೂ ನೀಡಿಲ್ಲವಾದರೂ ಅವರ ಉದ್ದೇಶ "ಹೀಗೆ ಆದುದು ಏಕೆ?" ಎಂದಾಗಿರಬಹುದು.

ಆದರೆ ಪವಿತ್ರ ಖುರ್‌ಆನಿನ ವಚನಗಳು ಸೂಚಿಸುವುದೇನೆಂದರೆ ಇಂತಹ ಸಂಭವಗಳು ಖಂಡಿತವಾಗಿಯೂ ನಡೆಯುವುವು ಎಂದಾಗಿದೆ. ಆದರೆ ಇಲ್‌ಹಾಮಿನಲ್ಲಿ ಸೂಚಿಸಲಾದಂತೆ ನಾವು ಅದರ ಬಗ್ಗೆ ಹೆದರಲಾರೆವು ಎಂದರ್ಥ. ಶತ್ರುಗಳು ಬೆಂಕಿ ಹೊತ್ತಿಸಿ ನಮ್ಮನ್ನು ಹೆದರಿಸಲು ಶಕ್ತರಾಗಲಾರರು. ಅವರ ಉದ್ದೇಶ ನಮ್ಮನ್ನು ಅಹ್ಮದಿಯತ್ತಿನಿಂದ ಹೊರಗೆ ಬರುವಂತೆ ಮಾಡುವುದಾಗಿದೆ. ಆದರೆ ಅಹ್ಮದಿಯರು ದೃಢ ವಿಶ್ವಾಸದಲ್ಲಿರುವರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲದಲ್ಲಿ ಸಹ ಮುಸ್ಲಿಮರು ಕೂಡಾ ಯುದ್ಧಗಳಲ್ಲಿ ಹುತಾತ್ಮರಾಗಿದ್ದರು. ಅವಿಶ್ವಾಸಿಗಳ ಮೃತರು ನರಕವಾಸಿಗಳಾಗುವರೆಂದೂ ಹುತಾತ್ಮರಾದ ಸತ್ಯ ವಿಶ್ವಾಸಿಗಳು ಸ್ವರ್ಗದಲ್ಲಿ ಶಾಶ್ವತ ಜೀವಿತ ಗಳಿಸುವರೆಂದೂ ಅಲ್ಲಾಹನು ಹೇಳಿರುವನು.

ಅಹ್ಮದಿಯಾ ಜಮಾಅತಿನ ಚರಿತ್ರೆಯಲ್ಲಿ ಸ್ತ್ರೀಯರು ಮಾತ್ರವೇ ಹುತಾತ್ಮರಾದ ಪ್ರಸಂಗ ಇದೇ ಪ್ರಥಮ ಬಾರಿಯಾಗಿದೆ. إِنْ شَاءَ اللّٰهُ ಅವರ ಬಲಿದಾನಗಳು ನಿಷ್ಫಲವಾಗಲಾರವು. ಮೃತರಾದವರು ಹೊಗೆಯಿಂದ ಉಸಿರುಗಟ್ಟಿ ಮೃತರಾಗಿದ್ದರು. ಅವರ ದೇಹ ಬಾಹ್ಯವಾಗಿ ಸುಡಲ್ಪಟ್ಟಿರಲಿಲ್ಲ. ಶತ್ರುಗಳು ಮನೆಯ ಪೀಠೋಪಕರಣಗಳನ್ನು ಮತ್ತು ಲೂಟಿ ಮಾಡಿ ಉಳಿದ, ಅವರಿಗೆ ಬೇಡವಾದ ಸಾಮಾಗ್ರಿಗಳನ್ನು ರಾಶಿ ಹಾಕಿ ಸುಟ್ಟು ಹಾಕಿದರು. ಶಹೀದರಾದವರಲ್ಲಿ ಒಬ್ಬರು ಮುನೀರ್ ಅಹ್ಮದ್ ಸಾಹೇಬರ ಪತ್ನಿ ಬುಶ್ರಾ ಬೇಗಮ್ ಸಾಹಿಬ, ಮುಹಮ್ಮದ್ ಬೂಟಾ ಸಾಹೇಬರ ಪುತ್ರಿಯರಾದ ಹೀರಾ ತಬಸ್ಸುಮ್ ಮತ್ತು ಕೈನತ್ ತಬಸ್ಸುಮ್ ಆಗಿದ್ದಾರೆ.

ದಿನಾಂಕ 27-7-2014ರಂದು ಗುಜ್ರಾನ್‌ವಾಲದ ಅಹ್ಮದಿಯರ ಮನೆಗಳಿಗೆ ಶತ್ರುಗಳು ಬೆಂಕಿ ಹಚ್ಚಿದಾಗ ಮೇಲೆ ವಿವರಿಸಿದ ಮೂವರು ಶಹೀದರಾದರು.

ಈ ಘಟನೆ ನಡೆದ ದಿನ ಉಪವಾಸ ಇಫ್ತಾರ್ ಮಾಡಿದ ನಂತರ ಮೃತ ಮಹಿಳೆಯ ಓರ್ವ ಮಗನಾದ ಮುಹಮ್ಮದ್ ಅಹ್ಮದ್ ಸಾಹಿಬ್ ಮದ್ದಿಗೋಸ್ಕರ ಹತ್ತಿರದ ಡಾಕ್ಟರರ ಕ್ಲಿನಿಕ್‌ಗೆ ಹೋದಾಗ ಅಲ್ಲಿ ಕೆಲವು ಜನರು ಒಬ್ಬ ಅಹ್ಮದಿ ತರುಣ ವಖಾಸ್‌ನನ್ನು ಹಿಡಿದಿಟ್ಟು ಕೊಂಡಿದ್ದನ್ನು ಕಂಡರು. ಅದರ ಕಾರಣವನ್ನು ಕೇಳಿದಾಗ ಅಲ್ಲಿದ್ದ ಜನರು ಆತನನ್ನು ಬೈದು, ಫೇಸ್‌ಬುಕ್‌ನಲ್ಲಿ ಒಬ್ಬ ಅಹ್ಮದಿ ಯುವಕ ಕಅಬದ ಚಿತ್ರಕ್ಕೆ ಅಪಮಾನ ಮಾಡಿದುದಾಗಿ ಹೇಳಿದರು. ಹೀಗೆ ಅಹ್ಮದಿ ಮಾಡಿರಲಿಕ್ಕಿಲ್ಲ ಎಂದು ಹೇಳಿದಾಗ ಜಗಳ ಪ್ರಾರಂಭವಾಗಿ ಒಡೆದ ಬಾಟ್ಲಿಗಳಿಂದ ಆಕ್ರಮಣ ಪ್ರಾರಂಭಿಸಿದರು. ಶತ್ರುಗಳು ಉದ್ದೇಶ ಪೂರ್ವಕವಾಗಿ ಜಗಳ ಪ್ರಾರಂಭಿಸಿದ್ದರು. ಅಲ್ಲಿಗೆ ಆಗಮಿಸಿದ ಫರ್ಖ್ಖ್ ಅಹ್ಮದ್ ಎಂಬ ಅಹ್ಮದಿಗೆ ಒಡೆದ ಬಾಟ್ಲಿಯ ಗಾಯವಾದ ನಂತರ ಜಗಳ ನಿಂತಿತು.

ಅದಾದ ಸ್ವಲ್ಪ ಸಮಯದ ನಂತರ ಇಲ್ಲಿ ತುಂಬಾ ಜನ ಜಮಾಯಿಸಿದ್ದಾರೆಂದೂ ಆಕ್ರಮಣಕ್ಕೆ ತಯಾರಿ ನಡೆಸುತ್ತಿದ್ದಾರೆಂದೂ ಮುಹಮ್ಮದ್ ಬೂಟಾ ಸಾಹೇಬರಿಗೆ ಡಾಕ್ಟರ್ ಫೋನ್ ಮಾಡಿ ತಿಳಿಸಿದರು. ಆ ಪ್ರದೇಶದಲ್ಲಿ ಅಹ್ಮದಿಯರ ಹದಿನೆಂಟು ಕುಟುಂಬಗಳು ವಾಸಿಸುತ್ತಿದ್ದರು. ವಿಷಯ ತಿಳಿದು ಕೆಲವರು ಮನೆ ಬಿಟ್ಟು ಹೋದರು. ನಾಲ್ಕು ಕುಟುಂಬಗಳು ಅಲ್ಲೇ ಉಳಿದವು. ರಾತ್ರಿ 8:30 ಗಂಟೆಗೆ ಶತ್ರುಗಳು ಅಹ್ಮದಿಯರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಅಹ್ಮದಿಯರ ಮನೆಗಳ ಬಾಗಿಲುಗಳನ್ನು ಮುರಿಯಲು ಪ್ರಾರಂಭಿಸಿದರು. ಒಂದು ಮನೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸಹಿತ ಹನ್ನೊಂದು ಜನರು ಒಂದು ಕೋಣೆಯಲ್ಲಿ ಆಶ್ರಯ ಪಡೆದಿದ್ದರು. ಆ ಕೋಣೆಯ ಬಾಗಿಲನ್ನು ಮುರಿಯಲು ಪ್ರಯತ್ನಿಸಿದಾಗ ಮುರಿಯಲು ಸಾಧ್ಯವಾಗಲಿಲ್ಲ. ಆಗ ಅವರು ಆ ಕೋಣೆಯ ಬಾಗಿಲನ್ನು

ಹೊರಗಿನಿಂದ ಚಿಲಕ ಹಾಕಿ ಒಳಗೆ ಇರುವವರಿಗೆ ತೆರೆಯಲು ಸಾಧ್ಯವಾಗದಂತೆ ಮಾಡಿದರು. ಅವರು ಒಂದು ಕಿಟಕಿಯ ಗ್ಲಾಸನ್ನು ಮುರಿದು ಹಾಕಿ ಅದರ ಬಳಿ ಪ್ಲಾಸ್ಟಿಕ್ ಸಾಧನಗಳು ಮತ್ತು ಇತರ ವಸ್ತುಗಳನ್ನು ರಾಶಿಹಾಕಿ ಬೆಂಕಿ ಹಚ್ಚಿದರು. ಬೆಂಕಿಯ ಹೊಗೆ ಕೋಣೆಯೊಳಗೆ ತುಂಬಿದಾಗ ಉಸಿರುಗಟ್ಟಿ ಮೇಲೆ ವಿವರಿಸಿದ ಮೂವರು ಹುತಾತ್ಮರಾದರು– إِنَّا لِلّٰهِ وَإِنَّا إِلَيْهِ رَاجِعُونَ

ಅಲ್ಲಿ ನೆರೆದಿದ್ದ ದೊಂಬಿಗಾರರು ಅಗ್ನಿಶಾಮಕ ದಳವನ್ನಾಗಲಿ ಅಂಬುಲೆನ್ಸ್ ಆಗಲಿ ಅಲ್ಲಿಗೆ ಬರಲು ಬಿಡಲಿಲ್ಲ. ಅವರು ಮನೆಗಳನ್ನು ಸುಟ್ಟು ಹಾಕಲು ತೊಡಗಿದರು. ಅಲ್ಲಿ ಪೋಲೀಸರು ಇದ್ದರೂ ಅವರು ಮೂಖ ಪ್ರೇಕ್ಷಕರಂತೆ ಇದ್ದರು. ಅವರು ಅಕ್ರಮಿಗಳನ್ನು ತಡೆಯಲಿಲ್ಲ. ಸಂಪರ್ಕ ಮಾಧ್ಯಮಗಳು ವರದಿ ಮಾಡಲು ತಡಮಾಡಿದುವು. ಪಂಜಾಬಿನ ಮುಖ್ಯಮಂತ್ರಿ ಶಹಬಾಝ್ ಶರೀಫ್ ದೊಂಬಿಗಾರರು ತಮ್ಮ ಕೆಲಸವನ್ನೆಲ್ಲಾ ಮಾಡಿ ಮುಗಿಸಿದ ನಂತರವೇ ಅದರ ಬಗ್ಗೆ ಗಮನ ಹರಿಸಿದರು.

ಶಹೀದರಾದ ಬುಶ್ರಾ ಬೇಗಮ್ ಸಾಹೇಬರವರ ಅಜ್ಜ, ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ಅಹ್ಮದಿಯರಾದರು. ಅವರ ಪತಿ ಆರು ತಿಂಗಳ ಹಿಂದೆ ಮೃತರಾಗಿದ್ದರು. ಶಹೀದರಾದ ಇತರ ಇಬ್ಬರು ಹುಡುಗಿಯರು ಅವರ ಮೊಮ್ಮಕ್ಕಳಾಗಿದ್ದರು. ಫೋಸ್ಟ್‌ಮಾರ್ಟಮ್ ನಂತರ ಅವರ ಆಭರಣಗಳನ್ನು ಸಹ ಶತ್ರುಗಳು ಕದ್ದರು.

ಗುಜ್ರಾನ್‌ವಾಲದ ಅಮೀರ್ ಸಾಹೇಬರು ಹೀಗೆ ಬರೆಯುತ್ತಾರೆ: ಜುಲೈ 27ರಂದು 400 ರಿಂದ 500ರ ತನಕ ಇದ್ದ ಗುಂಪು ಅಹ್ಮದಿಯರ ಮನೆಗಳನ್ನು ಆಕ್ರಮಿಸಿತು. ಫೇಸ್‌ಬುಕ್‌ನಲ್ಲಿ ಪ್ರಕಟವಾದ ಒಂದು ರೊಚ್ಚಿಗೆಬ್ಬಿಸುವ ಚಿತ್ರ ಆಖಿಬ್ ಸಲೀಮ್ ಎಂಬ ಅಹ್ಮದಿ ಯುವಕ ಪ್ರಕಟಿಸಿದ್ದನೆಂದು ಅವರು ಆಪಾದಿಸಿದ್ದರು. ಆದರೆ, ಅದು ಸುಳ್ಳು ಆಪಾದನೆ ಆಗಿತ್ತು. ದೊಂಬಿಗಾರರು ಏಳು ಅಹ್ಮದಿ ಮನೆಗಳಿಗೆ ಬೆಂಕಿ ಹಚ್ಚಿ ಲೂಟಿ ಮಾಡಿದರು. ಅಹ್ಮದಿಯರ ಅಂಗಡಿಗಳನ್ನೂ ಅಕ್ರಮಿಗಳು ಲೂಟಿ ಮಾಡಿದ್ದಾರೆ. ಮಹಿಳೆಯರಿಗೂ ಮಕ್ಕಳಿಗೂ ಗಾಯವಾಗಿದೆ. ಒಬ್ಬ ಅಹ್ಮದಿ ಮಹಿಳೆಗೆ ವಿಷವಾಯು ಸೇವನೆಯ ಕಾರಣ ಗರ್ಭಸ್ರಾವ ಉಂಟಾಗಿದೆ. ಆಕೆಯನ್ನು ರಬ್ವದ ತಾಹಿರ್ ಹಾರ್ಟ್ ಇನ್ಸಿಟ್ಯೂಟ್‌ಗೆ ಪ್ರವೇಶಗೊಳಿಸಲಾಗಿದೆ. ಅವರ ಸ್ಥಿತಿ ಗಂಭೀರವಿದೆ.

ಆರು ಅಹ್ಮದಿ ಮನೆಗಳನ್ನು ಸಂಪೂರ್ಣ ಸುಟ್ಟು ಹಾಕಲಾಗಿದೆ. ಎರಡು ಮನೆಗಳನ್ನು ಲೂಟಿ ಮಾಡಿ ಸಾಮಾಗ್ರಿಗಳನ್ನು ಸುಡಲಾಗಿದೆ. ಅಹ್ಮದಿಯರ ಐದು ವ್ಯಾಪಾರ ಸ್ಥಳಗಳನ್ನು ಲೂಟಿ ಮಾಡಿ ನಂತರ ಬೆಂಕಿ ಹಾಕಿ ಧ್ವಂಸಗೊಳಿಸಲಾಗಿದೆ. ಅಲ್ಲಿದ್ದ ಸಲಾತ್ ಸೆಂಟರ್(ಮಸೀದಿ)ಯನ್ನು ದ್ವಂಸಗೊಳಿಸಿ ಅದರಲ್ಲಿದ್ದ ಪವಿತ್ರ ಖುರ್‌ಆನ್ ಪ್ರತಿಗಳನ್ನೂ ಇತರ ಜಮಾಅತ್ ಗ್ರಂಥಗಳನ್ನೂ ಈ ಅಕ್ರಮಿಗಳು ಸುಟ್ಟು ಹಾಕಿದರು.

ಇದು ಈ ದೌರ್ಜನ್ಯಗಾರರ ಕೃತ್ಯಗಳಾಗಿವೆ. ದೌರ್ಜನ್ಯಗಾರರು ಪಶ್ಚಾತ್ತಾಪಗೊಂಡು ಪ್ರಾರ್ಥಿಸದಿದ್ದರೆ ಅವರಿಗೆ ನರಕದ ಶಿಕ್ಷೆಯೂ ಬೆಂಕಿಯ ಶಿಕ್ಷೆಯೂ ಲಭಿಸುವುದೆಂದು ಅಲ್ಲಾಹು ಹೇಳಿರುವನು. ಅವಿಶ್ವಾಸಿಗಳ ನಾಯಕರಿಗೆ ಅಲ್ಲಾಹನು ತಕ್ಕುದಾದ ಶಿಕ್ಷೆ ನೀಡಲಿ.

ಅಲ್ಲಾಹನು ಶಹೀದ್ ಆದವರ ಪದವಿ ಉನ್ನತ ಗೊಳಿಸಲಿ. ಬಂಧುಗಳನ್ನು ಕಳೆದು ಕೊಂಡವರಿಗೆ ಅಲ್ಲಾಹನು ಸಹನೆಯನ್ನು ದಯಪಾಲಿಸಲಿ. ಗಾಯಗೊಂಡವರನ್ನು ಅಲ್ಲಾಹನು ಸಂಪೂರ್ಣವಾಗಿ ಗುಣಪಡಿಸಲಿ. ಆರ್ಥಿಕ ನಷ್ಟವಾದವರನ್ನು ಅಲ್ಲಾಹನು ಅಧಿಕವಾಗಿ ಅನುಗ್ರಹಿಸಲಿ– ಆಮೀನ್.

---------------*****---------------


*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 01-08-2014*

***Kannada Translation:*** M Ubeidullah

***Reviewed by:*** M P Ibrahim | ***Typing:*** U Basheer Ahmad

*Published By**: Kannada Khutuba Desk*** (comes under the **Kannada Isha'at Team**)

*Ahmadiyya Muslim Jama`at, Karnataka*

*Email*: **khutuba.kannada@gmail.com**